ಕರ್ನಾಟಕ ವಿಧಾನ ಪರಿಷತ್

1. ಸದಸ್ಯರ ಹೆಸರು : ಡಾ॥ ಜೈಮಾಲ ರಾಮಚಂದ್ರ
2. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1123
3. ಉತ್ತರಿಸಬೇಕಾದ ದಿನಾಂಕ : 13-03-2020

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಕಳೆದ 03 ವರ್ಷಗಳಿಂದ ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಸಾಧಿಸಿರುವ ಗುರಿಗಳೇನು ಹಾಗೂ ಬಿಡುಗಡೆಗೊಳಿಸಲಾದ ಮೊತ್ತವೆಷ್ಟು;</td><td>ಕಳೆದ 3 ವರ್ಷಗಳಿಂದ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಸಾಧಿಸಿರುವ ಗುರಿ/ಪ್ರಗತಿ ಮತ್ತು ಬಿಡುಗಡೆಯಾಗಿರುವ ಅನುದಾನದ ವಿವರಗಳು ಕೆಳಕಂಡಂತಿವೆ. (ಕೋಟಿಗಳಲ್ಲಿ)
<table>
<tr><th rowspan="2">ವರ್ಷ</th><th rowspan="2">ಕಾರ್ಮಿಕ ಆಯವ್ಯಯ (ಮಾನವ ದಿನಗಳು)</th><th rowspan="2">ಸಾಧನೆ</th><th rowspan="2">ಶೇಕಡಾ ವಾರು</th><th colspan="3">ಅನುದಾನ ಬಿಡುಗಡೆ</th></tr>
<tr><th>ಕೇಂದ್ರ</th><th>ರಾಜ್ಯ</th><th>ಒಟ್ಟು</th></tr>
<tr><td>2016-17</td><td>10</td><td>9.14</td><td>91.4%</td><td>1350.46</td><td>1732.71</td><td>3074.17</td></tr>
<tr><td>2017-18</td><td>10</td><td>8.57</td><td>85.7%</td><td>2759.39</td><td>251.70</td><td>3011.09</td></tr>
<tr><td>2018-19</td><td>10</td><td>10.45</td><td>104.5%</td><td>2748.60</td><td>1045.91</td><td>3794.51</td></tr>
<tr><td>2019-20</td><td>12</td><td>10.43</td><td>86.92%</td><td>3541.97</td><td>788.39</td><td>4330.36</td></tr>
</table></td></tr>
<tr><td>(ಆ)</td><td>ಕಳೆದ 03 ವರ್ಷಗಳಿಂದ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಎಷ್ಟು ಕುಟುಂಬಗಳಿಗೆ ಉದ್ಯೋಗವನ್ನು ನೀಡಲಾಗಿದೆ;</td><td>ಮಹಾತ್ಮಗಾಂಧಿ ನರೇಗಾ ಯೋಜನೆಯಡಿ 2016-17ನೇ ಸಾಲಿನಲ್ಲಿ 18.18 ಲಕ್ಷ, 2017-18ನೇ ಸಾಲಿನಲ್ಲಿ 19.02 ಲಕ್ಷ, 2018-19ನೇ ಸಾಲಿನಲ್ಲಿ 21.08 ಲಕ್ಷ ಮತ್ತು 2019-20ನೇ ಸಾಲಿನಲ್ಲಿ (ಇಲ್ಲಿಯವರೆಗೆ) 21.74 ಲಕ್ಷ ಕುಟುಂಗಳಿಗೆ ಉದ್ಯೋಗ ನೀಡಲಾಗಿದೆ.</td></tr>
<tr><td>(ಇ)</td><td>ರಾಜ್ಯದಲ್ಲಿ ನೆರೆಯಿಂದ ಆಸ್ತಿ-ಪಾಸ್ತಿಗಳು ನಾಶವಾಗಿ ಬದುಕು ಕಟ್ಟಿಕೊಳ್ಳಲಾಗದವರಿಗೆ ಹೆಚ್ಚಿನ ಅನುದಾನ ನೀಡುವ ಮೂಲಕ ಉದ್ಯೋಗ ಸೃಷ್ಟಿ ಮಾಡುವ ಚಿಂತನೆ ಸರ್ಕಾರಕ್ಕಿದೆಯೆ;</td><td>ಹೌದು.
ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಒಂದು ಆರ್ಥಿಕ ಸಾಲಿನಲ್ಲಿ ಗ್ರಾಮೀಣ ಜನರಿಗೆ ಕನಿಷ್ಠ 100 ದಿನಗಳ ಉದ್ಯೋಗಾವಕಾಶ ಒದಗಿಸುವುದರ ಜೊತೆಗೆ ನೆರೆ/ಬರದಿಂದ ಹಾನಿಗೊಳಗಾದ ಪ್ರದೇಶಗಳಲ್ಲಿ ಕೇಂದ್ರ ಸರ್ಕಾರದ ಅನುಮೋದನೆಯೊಂದಿಗೆ ಹೆಚ್ಚುವರಿ ಕೂಲಿ ದಿನಗಳನ್ನು ನೀಡಿ ಉದ್ಯೋಗ ಸೃಜಿಸಲು ಯೋಜನೆಯ ಮಾರ್ಗಸೂಚಿಯಲ್ಲಿ ಅವಕಾಶ ಕಲ್ಪಿಸಲಾಗಿದ್ದು, ಅದರಂತೆ, ರಾಜ್ಯದಲ್ಲಿ ನೆರೆ/ಬರ ಪೀಡಿತ ಪ್ರದೇಶಗಳಲ್ಲಿ ಗ್ರಾಮೀಣ ಜನರಿಗೆ ಹೆಚ್ಚುವರಿ 50 ಮಾನವ ದಿನಗಳ ಉದ್ಯೋಗಾವಕಾಶ ನೀಡಲಾಗಿದೆ.
ಅಲ್ಲದೇ, ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಸೃಜಿಸಿದ ಸಾರ್ವಜನಿಕ ಮೂಲಭೂತ ಆಸ್ತಿ-ಪಾಸ್ತಿಗಳು ನರೆ ಹಾವಳಿಯಿಂದ ಹಾನಿಯಾದಲ್ಲಿ, ಸದರಿ ಆಸ್ತಿ-ಪಾಸ್ತಿಗಳನ್ನು ಯೋಜನೆಯಡಿ ಪುನರ್‌ನಿರ್ಮಾಣ ಮಾಡಲು ಸಹ ಅವಕಾಶವಿರುತ್ತದೆ.</td></tr>
<tr><td>(ಈ)</td><td>ಈ ಯೋಜನೆಗೆ ಸಂಬಂಧಿಸಿದ ಕಾರ್ಯಕ್ರಮಗಳಡಿಯಲ್ಲಿ ಎಷ್ಟು ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ? (ಜಿಲ್ಲಾವಾರು ಮಾಹಿತಿ ನೀಡುವುದು)</td><td>ಕಳೆದ 3 ವರ್ಷಗಳಿಂದ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಪೂರ್ಣಗೊಂಡಿರುವ ಕಾಮಗಾರಿಗಳ ಜಿಲ್ಲಾವಾರು ವಿವರಗಳನ್ನು <u>ಅನುಬಂಧ-1</u> ರಲ್ಲಿ ನೀಡಿದೆ.</td></tr>
</table>

ಸಂಖ್ಯೆ: ಗ್ರಾಅಪ 38(118) ಉಖಾಯೋ 2019

(ಕೆ.ಎಸ್.ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಅನುಬಂಧ–1

ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1123

ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಪೂರ್ಣಗೊಂಡಿರುವ ಕಾಮಗಾರಿಗಳ ಜಿಲ್ಲಾವಾರು ವಿವರಗಳು

ಕ್ರ.ಸಂ	ಜಿಲ್ಲೆ	ಪೂರ್ಣಗೊಂಡಿರುವ ಕಾಮಗಾರಿಗಳ ಸಂಖ್ಯೆ			
		2016–17	2017–18	2018–19	2019–20 (ದಿ:09–03–2020ರವರೆಗೆ)
1	ಬಾಗಲಕೋಟೆ	13462	7205	4990	1550
2	ಬಳ್ಳಾರಿ	24977	16482	10715	4970
3	ಬೆಳಗಾವಿ	38336	25656	18308	2447
4	ಬೆಂಗಳೂರು ನಗರ	3086	1239	434	79
5	ಬೆಂಗಳೂರು ಗ್ರಾಮಾಂತರ	5377	4756	5719	1164
6	ಬೀದರ್	14498	7524	3711	819
7	ಚಾಮರಾಜನಗರ	10857	9323	5270	1754
8	ಚಿಕ್ಕಬಳ್ಳಾಪುರ	16138	8523	4209	1056
9	ಚಿಕ್ಕಮಗಳೂರು	11442	10179	5684	1272
10	ಚಿತ್ರದುರ್ಗ	23970	18969	5487	723
11	ದಕ್ಷಿಣ ಕನ್ನಡ	16155	12557	6661	692
12	ದಾವಣಗೆರೆ	15269	7610	3196	193
13	ಧಾರವಾಡ	12175	7508	2668	623
14	ಗದಗ	19991	9595	3874	936
15	ಹಾಸನ	35632	23626	12088	1789
16	ಹಾವೇರಿ	18239	10956	3058	375
17	ಕಲ್ಬುರ್ಗಿ	18213	10872	4713	997
18	ಕೊಡಗು	3277	3153	1396	260
19	ಕೋಲಾರ	17302	7913	6784	998
20	ಕೊಪ್ಪಳ	15730	8387	2864	571
21	ಮಂಡ್ಯ	29080	19017	6989	369
22	ಮೈಸೂರು	22124	17994	10044	1241
23	ರಾಯಚೂರು	28539	16967	18230	3073
24	ರಾಮನಗರ	19995	23244	11087	4503
25	ಶಿವಮೊಗ್ಗ	11335	11437	4569	617
26	ತುಮಕೂರು	34045	21574	16636	4541
27	ಉಡುಪಿ	5808	3799	849	71
28	ಉತ್ತರ ಕನ್ನಡ	10601	6548	3993	534
29	ವಿಜಯಪುರ	17979	10869	7107	2752
30	ಯಾದಗಿರಿ	15354	8693	6025	376
ಒಟ್ಟು		**528986**	352175	197358	**41345**